**ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.**

**ಮಾದರಿ ಪ್ರಶ್ನೆಪತ್ರಿಕೆ–02**

**ವಿಷಯ: ಸಮಾಜ ವಿಜ್ಞಾನ** | **ತರಗತಿ: 10ನೇ ತರಗತಿ**

**ಅಂಕಗಳು: 80** | **ಸಮಯ: 3 ಗಂಟೆ 15 ನಿಮಿಷಗಳು**

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1. **ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು**
   A) ವಾರನ್ ಹೇಸ್ಟಿಂಗ್ಸ್ B) ಲಾರ್ಡ್‌ಕಾರ್ನ್‌ವಾಲೀಸ್
   C) ಲಾರ್ಡ್‌ಡಾಲ್‌ಹೌಸಿ D) ರಾಬರ್ಟ್ ಕ್ಲೈವ್
2. **ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳಲು ಕಾರಣ**
   A) ಚಂಪಾರಣ್ಯ ಘಟನೆ B) ಜಲಿಯನ್ ವಾಲಾಬಾಗ್ ಹತ್ಯಾಕಾಂಡ
   C) ಚೌರಿಚೌರ ಘಟನೆ D) ಹಲಗಲಿ ಘಟನೆ
3. **ಅಲ್ಯೂಮಿನಿಯಂನ್ನು 20ನೇ ಶತಮಾನದ ಅದ್ಭುತಲೋಹ ಎನ್ನುವರು, ಏಕೆಂದರೆ**
   A) ವೈವಿಧ್ಯಮಯ ಉಪಯೋಗಗಳಿಂದ B) ದುಬಾರಿಯಾದ ಕಾರಣ
   C) ಹೆಚ್ಚು ಉತ್ಪಾದನೆಯಾಗುತ್ತಿರುವುದರಿಂದ D) ಹಗುರವಾದ ಲೋಹವಾಗಿರುವುದರಿಂದ
4. **‘ಸಾರ್ವಜನಿಕ ಆಡಳಿತ’ ಎಂಬ ಪದವನ್ನು ಪ್ರಪ್ರಥಮ ಬಾರಿಗೆ ಬಳಸಿದವರು**
   A) ಲೂಥರ್‌ಗುಲಿಕ್ B) ವುಡ್ರೋವಿಲ್ಸನ್
   C) ಎಫ್,ಎಂ. ಮಾರ್ಕ್ಸ್ D) ಅಲೆಗ್ಸಾಂಡರ್ ಹ್ಯಾಮಿಲ್ಟನ್
5. **ಅಸ್ಪೃಶ್ಯತೆಯು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು**
   A) ಪಂಪ B) ಸರ್. ಎಂ. ವಿಶ್ವೇಶ್ವರಯ್ಯ
   C) ಡಾ. ಬಿ.ಆರ್. ಅಂಬೇಡ್ಕರ್ D) ಮಹಾತ್ಮ ಗಾಂಧೀಜಿ
6. **ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಿರುವ ನಮ್ಮ ಸಂವಿಧಾನದ ವಿಧಿ**
   A) 42ನೇ ವಿಧಿ B) 24ನೇ ವಿಧಿ
   C) 17ನೇ ವಿಧಿ D) 52ನೇ ವಿಧಿ
7. **ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಮುಖ್ಯತೆ ಪಡೆದ ಅಂಶ**
   A) ಎಲ್ಲರನ್ನು ಒಳಗೊಂಡ ಬೆಳವಣಿಗೆ B) ಬಡತನ ನಿರ್ಮೂಲನೆ
   C) ಸಾಮಾಜಿಕ ನ್ಯಾಯ D) ಸಾಕ್ಷರತೆಗೆ ಹೆಚ್ಚಿನ ಮಹತ್ವ
8. **ರಾಹುಲನು 1 ಕೋಟಿ 20ಲಕ್ಷ ಮೌಲ್ಯದ ಕಾರನ್ನು ಕೊಂಡಿದ್ದು ಕಾರಿನಲ್ಲಿ ದೋಷ ಕಂಡುಬಂದಿದೆ. ಆದರೆ ಕಾರ್ ಕಂಪನಿಯವರು ಸಮಸ್ಯೆಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಅವನು ದೂರು ಸಲ್ಲಿಸಬೇಕಾದ ಗ್ರಾಹಕ ವೇದಿಕೆ**
   A) ರಾಷ್ಟ್ರೀಯ ಆಯೋಗ B) ಜಿಲ್ಲಾ ಆಯೋಗ
   C) ರಾಜ್ಯ ಆಯೋಗ D) ಜಿಲ್ಲಾ ನ್ಯಾಯಾಲಯ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:–** **8x1=8**

9. ಎರಡನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು?
10. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಕಾರಣವಾದ ಕಾಯ್ದೆ ಯಾವುದು?
11. ಭಾರತದ ಪಶ್ಚಿಮ ಕರಾವಳಿ ತೀರದಲ್ಲಿ ಕಡಲ ಕೊರೆತವು ಹೆಚ್ಚಾಗಿರುತ್ತದೆ. ಏಕೆ?
12. ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಯಾರು ನೇಮಿಸುತ್ತಾರೆ?
13. ಕೂಲಿಯಿಂದ ಶಾಲೆಗೆ ಕಾರ್ಯಕ್ರಮವನ್ನು ಏಕೆ ಜಾರಿಗೆ ತರಲಾಗಿದೆ?
14. ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎನ್ನುವರು. ಏಕೆ?
15. ಭಾರತದ ಹಣಕಾಸು ವರ್ಷದ ಅವಧಿ ಯಾವುದು?
16. ಉದ್ಯಮಿಗಳು ಬಂಡವಾಳವನ್ನು ಹೇಗೆ ಸಂಗ್ರಹಿಸುತ್ತಾರೆ?

**III.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ:–** **8x2=16**

17. ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ಹೇಗೆ ವಿಲೀನಗೊಂಡಿತು?
18. ಪ್ರಥಮ ಮಹಾಯುದ್ಧದ ಪರಿಣಾಮಗಳೇನು?
19. ಸಾರ್ವಜನಿಕ ಆಡಳಿತವು ಸಾಮಾಜಿಕ ಭದ್ರತೆಯನ್ನು ಹೇಗೆ ದೃಢಪಡಿಸುತ್ತದೆ?

**ಅಥವಾ**

ಅಣ್ವಸ್ತ್ರ ಯುಗದಲ್ಲಿ 'ನಾವು ಯುದ್ಧವನ್ನು ಕೊನೆಗಾಣಿಸಬೇಕು, ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ', ವಿಶ್ಲೇಷಿಸಿ.

20. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
21. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಮೂಲ ಕೈಗಾರಿಕೆ ಎಂದು ಕರೆಯಲು ಕಾರಣವೇನು?
22. 'ಗ್ರಾಮೀಣಾಭಿವೃಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ ಅಪಾರವಾದುದು'. ಸಮರ್ಥಿಸಿ.
23. ಗ್ರಾಹಕರ ಹಕ್ಕುಗಳನ್ನು ಪಟ್ಟಿ ಮಾಡಿ.
24. ದೊಂಬಿಯನ್ನು ಹೇಗೆ ನಿಯಂತ್ರಿಸಬಹುದು?

**ಅಥವಾ**

ಬಾಲಕಾರ್ಮಿಕ ಸಮಸ್ಯೆಯಿಂದಾಗುವ ಪರಿಣಾಮಗಳೇನು?

**IV.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ :–** **9x3=27**

25. ಸಂಘಟಿತ ಹಾಗೂ ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ?
26. ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಬ್ರಿಟಿಷರಿಗೆ 'ಸಹಾಯಕ ಸೈನ್ಯ ಪದ್ಧತಿ'ಯು ಹೇಗೆ ನೆರವಾಯಿತು?

**ಅಥವಾ**

ಆಂಗ್ಲರ ವಿರುದ್ಧ ಕಿತ್ತೂರಿನಲ್ಲಾದ ದಂಗೆಯನ್ನು ವಿವರಿಸಿ.

27. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?
28. ಭಾರತದ ರಸ್ತೆ ಸಾರಿಗೆಯ ತೊಡಕುಗಳಾವುವು?
29. ಪ್ರಾರ್ಥನಾ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ?
30. ಕಾನ್‌ಸ್ಟಾಂಟಿನೋಪಲ್ ನಗರದ ಪತನದಿಂದಾದ ಪರಿಣಾಮಗಳೇನು?
31. ಮಣ್ಣಿನ ಸವೆತದ ಪರಿಣಾಮಗಳೇನು?

**ಅಥವಾ**

ಭೂಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವವು?

32. ಸುಗ್ಗಿಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನ ಹಸಿರು ಕ್ರಾಂತಿಯನ್ನು ಹೇಗೆ ಉಂಟು ಮಾಡಿತು?

**ಅಥವಾ**

ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸುಗಳಿಗಿರುವ ವ್ಯತ್ಯಾಸಗಳೇನು? ವಿವರಿಸಿ.

33. ಬ್ಯಾಂಕಿನಲ್ಲಿ ಖಾತೆ ತೆರೆಯುವ ವಿಧಾನವನ್ನು ವಿವರಿಸಿ.

**ಅಥವಾ**

ಉದ್ಯಮಿಯು ದೇಶವೊಂದರ ಸಂಪತ್ತು. ಹೇಗೆ? ವಿವರಿಸಿ.

**V.** **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ:–** **4x4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ವಿಶ್ಲೇಷಿಷಿ.
35. ಭಾರತದಲ್ಲಿ ಅರಣ್ಯ ಕ್ಷೇತ್ರವು ನಿರಂತರವಾಗಿ ಇಳಿಮುಖವಾಗುತ್ತಿದೆ, ಏಕೆ?
36. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.
37. ಭಾರತದಲ್ಲಿ ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳೇನು?

**ಅಥವಾ**

1857ರ ದಂಗೆಗೆ ಕಾರಣವಾದ ರಾಜಕೀಯ ಮತ್ತು ಆರ್ಥಿಕ ಕಾರಣಗಳನ್ನು ಪಟ್ಟಿಮಾಡಿ.

**VI.** 38. **ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಅಂಶಗಳನ್ನು ಗುರುತಿಸಿ :–** **5x1=5**

a) ಪಾಕ್ ಜಲಸಂಧಿ
b) ಗೋವಿಂದಸಾಗರ
c) ಸುಭಾಷ್ ಚಂದ್ರ ಬೋಸ್ ವಿಮಾನ ನಿಲ್ದಾಣ
d) $23^{\circ}\ 30^{1}$ ಉತ್ತರ ಅಕ್ಷಾಂಶ
e) ನೀಲಗಿರಿ
f) ಕೊಯ್ನಾ
g) ಕೊಂಕಣ ತೀರ